**PW_1**

**ಸಾಕ್ಷಿದಾರರು ಹಾಜರಿದ್ದು ಸಾಕ್ಷಿಗೆ ಸತ್ಯ ಪ್ರತಿಜ್ಞೆ ಮಾಡಿಸಲಾಯಿತುಃ**

**ಮುಂದುವರೆದ ಮುಖ್ಯ ವಿಚಾರಣೆಃ ಮಾನ್ಯ ಎ ಪಿ ಪಿ ರವರಿಂದಃ**

ನಾನು ದೂರಿಗೆ ಸಂಬಂದಿಸಿದಂತೆ ನ್ಯಾಯಾಲಯದ ಮುಂದೆ ನನ್ನ ಹೇಳಿಕೆಯನ್ನು ನೀಡಿರುತ್ತೇನೆ. ಸದರಿ ಹೇಳಿಕೆಯಲ್ಲಿ ಸಾಕ್ಷಿ ತನ್ನ ಸಹಿಯನ್ನು ಗುರುತಿಸಿದ್ದರಿಂದ ಹೇಳಿಕೆಯನ್ನು ನಿಪಿ.5 ಎಂದು ಸಾಕ್ಷಿಯ ಸಹಿಯನ್ನು ನಿಪಿ.5(ಎ) ಎಂದು ಗುರುತಿಸಲಾಯಿತು.

**ಪಾಟೀ ಸವಾಲು ಆರೋಪಿಯ ಪರ ಶ್ರೀ ಬಿ ಕೆ ಆರ್ ವಕೀಲರಿಂದಃ**

1. ಆರೋಪಿತರು ನನಗೆ ತಮ್ಮ ಮತ್ತು ತಮ್ಮನ ಹೆಂಡತಿಯಾಗಬೇಕು. ನನ್ನ ತಂದೆಗೆ ಸೇರಿದ ಜಮೀನು ಜೋಗಿಮಟ್ಟಿಯಲ್ಲಿ ಇದೆ ಎಂದರೆ ಹೌದು . ಆ ಜಮೀನು 4 ಗುಂಟೆ ಆಗಿರುತ್ತದೆ. ಆ ಜಾಗದಲ್ಲಿ ನಾವೆಲ್ಲಾ ವಾಸ ಮಾಡುತ್ತಿಲ್ಲ ಅದರ ಪಕ್ಕದ ಜಾಗದಲ್ಲಿ ವಾಸ ಮಾಡುತಿದ್ದೇವೆ. ಈಗ ನನ್ನ ತಂದೆ ತೀರಿಹೋಗಿದ್ದಾರೆ ಎಂದರೆ ಹೌದು. 1 ನೇ ಆರೋಪಿಯಾದ ರವಿ ಕುಮಾರ್ ರವರು ಕೂಡ ಅವರಿಗೆ ಈ ಜಾಗದಲ್ಲಿ ಬಾಗ ಕೊಡಿ ಅಂತ ಕೇಳಿದ್ದಾರೆ ಎಂದರೆ ಹೌದು. ನಾವು ಅಕ್ಕ ತಂಗಿಯರು ಸೇರಿ 1 ನೇ ಆರೋಪಿಗೆ ಬಾಗ ಕೊಡಲ್ಲ ಅಂತ ಹೇಳಿರುತ್ತೇವೆ ಎಂದರೆ ಸರಿಯಲ್ಲ ಕೊಟ್ಟಿರುತ್ತೇವೆ. ಈ ಜಮೀನು ವಿಚಾರವಾಗಿ ನಾವು ಓ ಎಸ್ .288/2016 ರಂತೆ ದಾವೆ ಹಾಕಿರುತ್ತೇವೆ ಎಂದರೆ ಹೌದು. ಆರೋಪಿತರಿಗೆ ನೋಟೀಸು ಜಾರಿ ಮಾಡಲು ಬಂದಾಗ ಆ ನೋಟೀಸು ನಮಗೆ ಕೊಡಿ ನಾನು ಆರೋಪಿತರನ್ನು ಕಂಡು ವಕೀಲರನ್ನು ನೇಮಿಸುತ್ತೇನೆ ಅಂತ ಹೇಳಿರುತ್ತೇನೆ ಎಂದರೆ ಸುಳ್ಳು. ಜಾಗ ಮತ್ತು ಜಮೀನು ವಿಚಾರವಾಗಿ ನಮಗೂ ಮತ್ತು 1 ನೇ ಆರೋಪಿಗೂ ಆಗಲ್ಲ ಎಂದರೆ ಹೌದು. ಆರೋಪಿತರ ವಿರುದ್ದ ಹಲವಾರು ಬಾರಿ ದೂರು ಕೊಟ್ಟಿರುತ್ತೇವೆ ಎಂದರೆ ಹೌದು. ಈ ಜಾಗ ಆರೋಪಿತರಿಗೆ ಸಿಗಬಾರದು ಅಂತ ಸುಳ್ಳು ಸುಳ್ಳು ಕೇಸು ಆರೋಪಿತರ ಮೇಲೆ ಕೊಟ್ಟಿರುತ್ತೇನೆ ಎಂದರೆ ಸುಳ್ಳು ಅವರು ಜಗಳ ಆಡಿದ್ದೆಲ್ಲಾ ನಿಜ ಇರುತ್ತದೆ. ಮಹಿಳಾ ಪೊಲೀಸ್ ಠಾಣೆಯಲ್ಲಿ ನಮ್ಮನ್ನು ಕರೆಸಿ ಮಾತನಾಡಿದರು ಎಂದರೆ ಹೌದು. ಅಲ್ಲಿ

**PW_1**

ಆರೋಪಿತರಿಗೆ ಜಾಗ ಕೊಡಿ ಮನೆ ಕಟ್ಟಿಕೊಳ್ಳಲು ಅಂತ ಹೇಳಿರುತ್ತಾರೆ ಎಂದರೆ ಹೌದು ನಾವು ಕೊಟ್ಟಿರುತ್ತೇವೆ ಮತ್ತು ಅವರು ಮನೆ ಕಟ್ಟಿಕೊಂಡಿರುತ್ತಾರೆ.ನಾನು ನಮ್ಮ ತಂದೆಯ 6 ಗುಂಟೆ ಜಾಗದಲ್ಲಿ ವಾಸ ಮಾಡುತ್ತಿಲ್ಲ ಬದಲಾಗಿ ಬೇರೆ ಕಡೆ ಸಪರೇಟ್ ಆಗಿ ವಾಸ ಮಾಡುತಿದ್ದೇನೆ. ಆರೋಪಿತರು ಬೈಕ್ ಸರಿಸುವ ವಿಚಾರದಲ್ಲಿ ಗಲಾಟೆ ಮಾಡಿರುತ್ತಾರೆ ಅಂತ ಸುಳ್ಳು ಹೇಳುತಿದ್ದೇನೆ ಎಂದರೆ ಸರಿಯಲ್ಲ. ಆ ಸಮಯದಲ್ಲಿ ನಮ್ಮ ಅಕ್ಕ ತಂಗಿಯರು ಬಂದು ಬಿಡಿಸಿದರು ಅಂತ ಹೇಳಿದ ವಿಚಾರ ಸುಳ್ಳು ಎಂದರೆ ಸರಿಯಲ್ಲ. ನಂತರ ನನಗೆ ಆಸ್ಪತ್ರೆಗೆ ಸೇರಿಸಿದರು ಅಂತ ಹೇಳಿದ ವಿಚಾರ ಕೂಡ ಸುಳ್ಳು ಎಂದರೆ ಸರಿಯಲ್ಲ. ದಿಃ17.04.2022 ರಂದು ಗಲಾಟೆ ಆದ ಸ್ಥಳದಲ್ಲಿ ಮಹಜರ ಮಾಡಿದರು ಅಂತ ಹೇಳಿದ ವಿಚಾರ ಕೂಡ ಸುಳ್ಳು ಎಂದರೆ ಸರಿಯಲ್ಲ. ಮಹಜರ ಕಾಲದಲ್ಲಿ ಫೊಟೊ ಕೂಡ ತೆಗೆದರು ಅಂತ ಹೇಳಿದ ವಿಚಾರ ಸುಳ್ಳು ಎಂದರೆ ಸರಿಯಲ್ಲ. ನಮ್ಮ ಅಕ್ಕ ತಂಗಿಯರಿಗೆ ಆರೋಪಿ ಒಬ್ಬನೇ ತಮ್ಮ ಎಂದರೆ ಹೌದು ಆದರೆ ನಮಗೆ ಅಣ್ಣ ಕೂಡ ಇದ್ದರು ಅವರು ಈಗ ಜೀವಂತ ಇಲ್ಲ. ನಮ್ಮ ಮದುವೆ ಆದಾಗಿನಿಂದ ಆರೋಪಿತರಿಗೂ ನಮಗೂ ದ್ವೇಷ ವೈಷಮ್ಯ ಎಂದರೆ 7-8 ವರ್ಷದಿಂದ ಎಂದು ಹೇಳುತ್ತಾರೆ. ಆರೋಪಿಗೆ ಏನಾದರೂ ಮಾಡಿ ನಮ್ಮ ತಂದೆ ಆಸ್ತಿಯಿಂದ ಹೊರಗಡೆ ಕಳುಹಿಸಬೇಕು ಅಂತ ಈ ರೀತಿ ಸುಳ್ಳು ದೂರು ಕೊಟ್ಟಿರುತ್ತೇವೆ ಎಂದರೆ ಸರಿಯಲ್ಲ. ನಾನು ಮತ್ತು ನನ್ನ ಅಕ್ಕ ತಂಗಿಯರು ಸೇರಿಕೊಂಡು ಆರೋಪಿಗೆ ತೊಂದರೆ ಕೊಡುವ ಸಲುವಾಗಿ ಸುಳ್ಳು ದೂರು ಕೊಟ್ಟು ಸುಳ್ಳು ಸಾಕ್ಷ್ಮಿ ನುಡಿಯುತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ತಕ್ಕಂತೆ ಬೆರಳಚ್ಚುಮಾಡಲಾಯಿತು)**

**ಓ ಹೇ ಕೇ ಸರಿ ಇದೆ**

**1 ನೇ ಹೆಚ್ಚುವರಿ ಹಿರಿಯ ಸಿವಿಲ್ ಮತ್ತು**
**ಜೆ ಎಂ ಎಫ್ ಸಿ ನ್ಯಾಯಾಧೀಶರು, ಚಿತ್ರದುರ್ಗ**